Applications received for Sanction of Irrigation Wells in Tiptur Taluk for the past 3 Years.

*Q.—494. Sri K. P. REVANNA SIDDAPPA (Tiptur).—

Will the Government be pleased to state :—

(*a*) the number of applications received by them requesting sanction of amount for irrigation wells in Tiptur Taluk for the past 3 years ;

(*b*) the number of them for which amount has been sanctioned so far ?

A.—Sri M. V. KRISHNAPPA (Minister for Revenue).—

	1960-61	1961-62	1962-63
(*a*)	278	2	117
(*b*)	50	...	91

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—278 ಅರ್ಜಿಗಳಿಗೆ, 50 ಅರ್ಜಿಗಳು ಮಂಜೂರಾಗಿವೆ. ಹೀಗಾದರೆ ತಿಪಟೂರು ತಾಲ್ಲೂಕಿನಲ್ಲಿ ಈ ಬಾವಿಗಳನ್ನು ಎಲ್ಲರಿಗೂ ಒದಗಿಸಲು ಇನ್ನೂ ಎಷ್ಟು ವರ್ಷಗಳ ಕಾಲ ಬೇಕಾಗಬಹುದು ?

†ಶ್ರೀ ಎಂ. ವಿ. ಕೃಷ್ಣಪ್ಪ.—1961-62ರಲ್ಲಿ 117 ಅರ್ಜಿಗಳಲ್ಲಿ 91 ಜನರಿಗೆ ಮಂಜೂರು ಮಾಡಿದ್ದೇವೆ. ಬೇರೆ ತಾಲ್ಲೂಕಿನವರಿಗೆ ಇಷ್ಟು ಕೊಟ್ಟಿದ್ದರೆ ಅವರೆಷ್ಟೋ ಕೃತಜ್ಞರಾಗಿರುತ್ತಿದ್ದರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ತಾಲ್ಲೂಕ್ ಕ್ಷಾಮಪೀಡಿತ ಪ್ರದೇಶವಾಗಿರುವುದರಿಂದ ಇಲ್ಲಿಗೆ ಇನ್ನೂ ಹೆಚ್ಚು ಹಣವನ್ನು ಒದಗಿಸಲು ಪ್ರಯತ್ನಮಾಡುತ್ತೀರಾ ? ಮತ್ತು ಒಂದೇ ಕಂತಿನಲ್ಲಿ ಪರ್ಸೆಂಟೇಜನ್ನು ಸಾಲದರೂಪದಲ್ಲಿ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇಡೀ ತುಮಕೂರು ಜಿಲ್ಲೆಯನ್ನು ಅಭಾವ ಪ್ರದೇಶವೆಂದು ಪರಿಗಣಿಸಲು ಸಾಧ್ಯವಿಲ್ಲ. ತುಮಕೂರು, ಸಿರಾ, ಪಾವಗಡ, ಮಧುಗಿರಿ ಮತ್ತು ತಿಪಟೂರು ಈ ತಾಲ್ಲೂಕ್ ಗಳಿಗೆ ಹೆಚ್ಚಿಗೆ ಕೊಡಲಾಗಿದೆ, ಇನ್ನುಳಿದ ತಾಲ್ಲೂಕುಗಳಿಗೆ ಕಡಮೆ ಕೊಡಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಧುಗಿರಿಯ ಸಬ್‌ಡಿವಿಜನ್ನಿಗೆ ಜಾಸ್ತಿಕೊಡಲಾಗಿದೆಯೆಂದು ಹೇಳಿದರು. ಮುಂದಿನ ವರ್ಷವಾದರೂ ತಿಪಟೂರು ಸಬ್‌ಡಿವಿಜನ್ನಿಗೆ ಹೆಚ್ಚಿಗೆ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇತ್ತೀಚೆಗೆ ಈ ಸಬ್ ಡಿವಿಜನ್ನಿಗೂ ಜಾಸ್ತಿಕೊಡುತ್ತಿದ್ದೇವೆ. ನೋಡಿ ಈಗ 117 ಕ್ಕೆ 91 ಕೊಟ್ಟಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಒಬ್ಬ ರೈತನಿಗೆ ಒಂದು ಬಾವಿಯಿದ್ದರೆ, ಅತನಿಗೆ ಇನ್ನೊಂದು ಬಾವಿಗೆ ಹಣ ಕೊಡಬಾರದೆಂದು ಹೇಳುತ್ತಿದ್ದಾರೆ. ಜಮೀನು ಜಾಸ್ತಿಯಿದ್ದರೆ ಏಕೆ ಕೊಡಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇತರರ ಅಪ್ಲಿಕೇಷನ್‌ಗಳಿಲ್ಲದಿದ್ದರೆ ಅಂಥವರಿಗೂ ಕೊಡಬಹುದು. ಅದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಅರ್ಜಿಗಳು ಬರತಕ್ಕ ಕ್ರಮದಲ್ಲೇ ಅವುಗಳನ್ನು ರಿಜಿಸ್ಟರ್ ಮಾಡಿ ಒಂದು ನೀತಿ ಪ್ರಕಾರ ಹಂಚದೆ ತಮಗೆ ಮನಸ್ಸು ಬಂದವರಿಗೆ ಹಂಚತಕ್ಕ ನೀತಿಯನ್ನು ತಪ್ಪಿಸುವಿರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರಿಗೆ ಇದರ ವಿಚಾರ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತಿದೆ. ತಾಲ್ಲೂಕ್ ಬೋರ್ಡ್‌ಸದಸ್ಯರ ಸಭೆಸೇರಿ ಇದನ್ನು ಹೋಬಳಿಗಿಷ್ಟೆಂದು ತೀರ್ಮಾನ ಮಾಡಿ, ಅದರಲ್ಲಿ ಎಷ್ಟೋ ವಾಜ್ಯ ಹೊಡೆದಾಟಗಳೂ ಕೂಡ ಆಗಿವೆ. ಇದನ್ನು ಆ ಧೇರ್ಮನ್ನರೂ ಸದಸ್ಯರುಗಳೂ ಸೇರಿ ತೀರ್ಮಾನಮಾಡುತ್ತಾರೆ. ಅವರ ಶಿಫಾರ್ಸಿನ ಪ್ರಕಾರ ಸಬ್‌ಡಿವಿಜನ್ನರು ಆರ್ಡರ್ ಮಾಡುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ಮಧುಗಿರಿ ಸಬ್‌ಡಿವಿಜನ್ ಒಂದು ಮಾತ್ರ ಅಭಾವಪ್ರದೇಶವೆಂದು ಹೇಳಿದರು, ನಮ್ಮ ತಿಪಟೂರು ತಾಲ್ಲೂಕಿನಲ್ಲೂ, ತುರುವೇಕೆರೆ, ಚಿಕ್ಕನಾಯಕನಹಳ್ಳಿ ತಿಪಟೂರು ಇವೆಲ್ಲ ಅಭಾವಪ್ರದೇಶಗಳೆಂದು ಏಕೆ ಸಾರಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಿರಾ, ಪಾವಗಡ, ಮಧುಗಿರಿಯಷ್ಟು ಇವು ಅಭಾವ ಪ್ರದೇಶಗಳಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಘನ್ಯ ನಚಿವರು ತಾಲ್ಲೂಕ್ ಬೋರ್ಡಿನ ಅಧ್ಯಕ್ಷರೂ ಮತ್ತು ನದನ್ಯರುಗಳೂ ಬಾವಿಗಳನ್ನು ಕೊಡತಕ್ಕ ವಿಚಾರದಲ್ಲಿ ಒಂದು ತೀರ್ಮಾನ ಕೊಡುತ್ತಾರೆಂದು ಅಶ್ವಣ್ ಕೊಡಿಸಿದರು. ಅಂದರೆ ಅಲ್ಲಿ ಈ ವಿಚಾರ ಬಹುಮತದ ಮೇಲೆ ತೀರ್ಮಾನ ಆಗುತ್ತದೋ ಅಥವಾ ಅರ್ಜಿಗಳು ಬಂದಿರತಕ್ಕ ತಾರೀಕುವಾರು ಮೇಲೆ ತೀರ್ಮಾನಮಾಡುತ್ತಾರೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಾಗೆ ಮೆಜಾರ್ಟಿ ನೋಡಿಕೊಂಡು ಮಾಡುವುದಿಲ್ಲ. ನಾವು ಹೇಳಿರತಕ್ಕದ್ದು ಇನ್ ಕನ್ಸಲ್ಟೇಷನ್ ವಿತ್ ದಿ ತಾಲ್ಲೂಕ್ ಬೋರ್ಡ್ ಎಂತ ಹೇಳಿದ್ದೇವೆ. ಅಲ್ಲಿಯ ನದನ್ಯರುಗಳು ನಮ್ಮ ಹೋಬಳಿಗೆ ಜಾಸ್ತಿಬೇಕು, ನಮ್ಮ ಹೋಬಳಿಗೆ ಜಾಸ್ತಿಬೇಕು ಎಂದು ಎಷ್ಟೋ ನಾರ್ತಿ ಅಲ್ಲಿಗೆ ಹೊಡೆದಾಟಗಳೂ ಕೂಡ ಆಗಿವೆ.

ಶ್ರೀ ಸಂಜೀವನಾಥ ಐಕಳ.—ಮಧುಗಿರಿ ತಾಲ್ಲೂಕಿನಲ್ಲಿ ತೀವ್ರ ಅಭಾವ ಪರಿಸ್ಥಿತಿ ಬಂದಿದೆಯೆಂದು ಅಲ್ಲಿನ ರೈತರು ಅನೇಕರು ಪಂಪುಸೆಟ್ಟುಗಳಿಗಾಗಿ ಅರ್ಜಿಗಳನ್ನು ಸಲ್ಲಿನಲು ಸಲುವಾಗಿ ತಾರೀಖು 21-3-1964ರಲ್ಲಿ ಜನನಂಘ ನಭೆಯಲ್ಲಿ ನಾಮೂಹಿಕವಾಗಿ ನತ್ಯಾಗ್ರಹ ಮಾಡುತ್ತೇವೆಂದು ಹೇಳಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ತಿಪಟೂರಿನ ಪ್ರಶ್ನೆ. ಮಧುಗಿರಿ ಪ್ರಶ್ನೆ ಮಾನ್ಯ ನದನ್ಯರಿಗಿಂತಲೂ ಚೆನ್ನಾಗಿ ಗೊತ್ತಿದೆ. ಈ ತಾಲ್ಲೂಕಿಗೇ ಹೆಚ್ಚಿಗೆ ಕೊಟ್ಟಿದ್ದೇವೆ. ಬೇರೆ ತಾಲ್ಲೂಕುಗಳಲ್ಲಿ 917 ಕೇಳಿದ್ದರೆ 209 ಬಾವಿಗಳನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ತಿಪಟೂರು ಮತ್ತು ಗುಬ್ಬಿ ತಾಲ್ಲೂಕಿನಲ್ಲಿ ತೆಂಗಿನಮರಗಳಿವೆ. ಅಲ್ಲಿ ಅಷ್ಟೊಂದು ಬಾವಿಗಳಿಲ್ಲ. ಬೇರೆ ತಾಲ್ಲೂಕುಗಳಲ್ಲಿ ತೆಂಗಿನಮರಗಳೂ ನಹ ಇಲ್ಲದೆ ಅಲ್ಲಿನ ಜನಗಳು ಬೇರೆ ಕಡೆ ವಲಸೆ ಹೋಗುತ್ತಿದ್ದಾರೆ. ಅದಕ್ಕೋನ್ಕರ ತೆಂಗಿನಮರಗಳು ಇಲ್ಲದಿರುವ ಕಡೆ ಅಂದರೆ ಸಿರಾ, ಮಧುಗಿರಿ, ಪಾವಗಡ, ಮುಂತಾದ ತಾಲ್ಲೂಕುಗಳಲ್ಲಿ ಬಾವಿಗಳನ್ನು ಹೆಚ್ಚಿಗೆ ಕೊಟ್ಟಿದ್ದಾರೆ. ಇನ್ನುಮುಂದೆ ಬಾವಿಗಳಿಗಾಗಿ ಹಣವನ್ನು ಹಂಚುವಾಗ ನಮಾನಾಗಿ ಎಲ್ಲಾ ತಾಲ್ಲೂಕುಗಳಿಗೂ ಹಂಚುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಾನಾಗಿ ಕೊಡುವುದಕ್ಕಾಗುವುದಿಲ್ಲ. ಬಾವಿಗಳನ್ನು ಪಾವಗಡ ಎಲ್ಲಾ ಕಡೆಗಳಲ್ಲೂ ಅಗೆಯುವುದಕ್ಕಾಗುವುದಿಲ್ಲ. ವ್ಯಾಲಿಯಲ್ಲಿ ನೀರು ಚೆನ್ನಾಗಿ ಬರಬೇಕು. ಮಾನ್ಯ ನದನ್ಯರ ತಾಲ್ಲೂಕಿನಲ್ಲಿ ಕೆಲವು ಪ್ರದೇಶಗಳಲ್ಲಿ ಅದರ ಅವಶ್ಯಕತೆ ಇದೆ ಎನ್ನುವುದರಲ್ಲಿ ಏನೂ ಆನುಮಾನವಿಲ್ಲ. ನಾನು ಕೆಲವು ಕಡೆಗಳಲ್ಲಿ ನೋಡಿದ್ದೇನೆ. ತೆಂಗಿನ ಮರಗಳನ್ನು ಬಾವಿ ನೀರಿನಿಂದ ಇರ್ರಿಗೇಟ್ ಮಾಡಿದರೆ ಒಂದಕ್ಕೆ ಡಬ್ಬಲ್ ಫಸಲು ಬರುವುದು. ಅದ್ದರಿಂದ ದುಡ್ಡು ನರ್ಕಾರಕ್ಕೆ ಜಾಸ್ತಿ ಬಂದರೆ, ಆಗ ನೀರಾವರಿ ಪಂಪುಸೆಟ್ಟುಗಳನ್ನು ಜಾಸ್ತಿಯಾಗಿ ಕೊಡಬೇಕೆಂಬುದೇ ನರ್ಕಾರದ ಉದ್ದೇಶ.

ಶ್ರೀ ಬಿ. ಚನ್ನಬೈರೇ ಗೌಡ.—ತಾಲ್ಲೂಕು ಬೋರ್ಡಿನವರು ಇದಕ್ಕಾಗಿ ಬಂದ' ಅರ್ಜಿಗಳನ್ನು ಟಾಪ್ ಪ್ರೈಯಾರಿಟಿ ಲಿಸ್ಟ್ ಪ್ರಕಾರ ಮೇಂಟೇನ್ ಮಾಡುತ್ತಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾವಾಗಲೂ ಒಂದೊಂದು ನಲ ಅಲಾಟ್‌ಮೆಂಟ್ ಬಂದಾಗ ಅರ್ಜಿಗಳನ್ನು ಕಾರ್‌ಫಾರ್ ಮಾಡುತ್ತಾರೆ. ಒಂದು ತಾಲ್ಲೂಕಿನಲ್ಲಿ 100 ಬಾವಿಗಳನ್ನು ಕೊಡುವುದಾದರೆ 200 ಅರ್ಜಿಗಳು ಬಂದಿರುತ್ತವೆ. ಆಗ 100 ಜನಗಳಿಗೆ ಕೊಡುತ್ತೇವೆ. ಇನ್ನು ಮಿಕ್ಕ 100 ಅರ್ಜಿಗಳನ್ನು ಪೆಂಡಿಂಗ್‌ನಲ್ಲಿಟ್ಟು ರಿಕಾರ್ಡ್ಸ್ ಬಿಲ್ಡಪ್ ಮಾಡುತ್ತೇವೆ. ಮುಂದಿನ ಅಲಾಟ್‌ಮೆಂಟಿನಲ್ಲಿ ಅಡಿಷನಲ್ ಫಂಡ್ಸ್ ಬಂದಾಗ ಉಳಿದವರಿಗೆ ಕೊಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ನನ್ನ ಪ್ರಶ್ನೆಗೆ ಉತ್ತರವನ್ನು ಸ್ಪೆಸಿಫಿಕ್ಕಾಗಿ ಹೇಳಬೇಕು. ಅವರು ಪ್ರೈಯಾರಿಟಿ ಲಿನ್ಟನ್ನು ಮೇಂಟೇನ್ ಮಾಡಿಕೊಟ್ಟಿದ್ದರೆ ಆ ಪ್ರಕಾರವಾಗಿಯೇ ಹಂಚುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಅರ್ಜಿಗಳು ಬಂದ ತಕ್ಷಣ ಎಲ್ಲವನ್ನೂ ನ್ಕ್ರೂಟಿನಿ ಮಾಡಿ ಒಂದು ಲಿನ್ಟನ್ನು ಇಟ್ಟಿರುತ್ತಾರೆ. ಅವುಗಳಲ್ಲಿ ಎಷ್ಟು ವ್ಯಾಲಿಡ್ ಮತ್ತು ಎಷ್ಟು ಇನ್ ವ್ಯಾಲಿಡ್ ಎಂದು ಪರಿಗಣಿಸಿದ ಮೇಲೆ ವ್ಯಾಲಿಡ್ ಆಗಿರುವುವುಗಳಿಗೆ ಮೊದಲು ಕೊಟ್ಟ ಅಮೇಲೆ ಉಳಿದುವುಗಳನ್ನು ಬೇರೆ ಅಲಾಟ್ ಮೆಂಟಿನಲ್ಲಿ ಪರ್ಯಾಲೋಚಿಸಿ ಕೊಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಅಭಾವ ಪ್ರದೇಶವಾಗಿರುವುದರಿಂದ ಅಲ್ಲಿ ನೀರಾವರಿ ಬಾವಿಗಳ ಪಂಪುಸೆಟ್ಟುಗಳನ್ನು ಕೊಟ್ಟಿರುವಂತೆ, ತುರವೇಕೆರೆ ಮತ್ತು ಕುಣಿಗಲ್ ತಾಲ್ಲೂಕುಗಳೂ ಸಹ ಅಷ್ಟೇ ಅಭಾವ ಪ್ರದೇಶಗಳೆಂದು ವಿಶೇಷವಾಗಿ ಈ ಪ್ರದೇಶಗಳಿಗೂ ನೀರಾವರಿ ಬಾವಿ ಪಂಪುಸೆಟ್ಟುಗಳನ್ನು ಕೊಡಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿಚಾರವನ್ನು ಜಿಲ್ಲಾಧಿಕಾರಿಗಳಿಗೆ ತಿಳಿನುತ್ತೇವೆ.